International Journal of Kannada Research 2018; 4(3): 147-149

International Journal of Kannada Research
www.kannadajournal.com

**ISSN: 2454–5813**
IJKR 2018; 4(3): 147-149
© 2018 IJKR
www.kannadajournal.com
Received: 26-05-2018
Accepted: 27-06-2018

**ಶ್ರೀ ಉದಯಕುಮಾರ ಎಸ್ ಅರಬಗಟ್ಟೆ**
ಅರಬಗಟ್ಟೆ ಅಂಚೆ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ,– ೫೭೭೨೧೭

**Correspondence**
**ಶ್ರೀ ಉದಯಕುಮಾರ ಎಸ್ ಅರಬಗಟ್ಟೆ**
ಅರಬಗಟ್ಟೆ ಅಂಚೆ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ,

# ಹೊನ್ನಾಳಿ ತಾಲ್ಲೂಕಿನ ಶಾಸನೋಕ್ತ ಸ್ಥಳನಾಮಗಳು

**ಶ್ರೀ ಉದಯಕುಮಾರ ಎಸ್ ಅರಬಗಟ್ಟೆ**

ಹೊನ್ನಾಳಿ ತಾಲ್ಲೂಕಿನಲ್ಲಿ ಗತಕಾಲದ ವೈಭವವನ್ನು ಹೇಳುವ ವಿವಿಧ ಶಾಸನಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ತಾಮ್ರಪತ್ರಗಳು ದೊರಕಿವೆ. ಇಂತಹವುಗಳನ್ನ ಕುರಿತು ಬಿ ಎಲ್ ರೈಸ್ ರವರು ಸಂಪಾದಿಸಿರುವ ಎಪಿಗ್ರಪಿಯಾ ಕರ್ನಾಟಕದ ಏಳನೇ ಸಂಪುಟ, ಮೈಸೂರಿನ ಪ್ರಾಚ್ಯವಸ್ತು ಇಲಾಖೆಯ ವರದಿ ಮತ್ತು ಶಿವಮೊಗ್ಗ ಸಪ್ಲಿಮೆಂಟ್‌ಗಳಲ್ಲಿ ಶಾಸನಗಳ ಮಾಹಿತಿ ದೊರಕುತ್ತದೆ. ಇವುಗಳಲ್ಲಿ ಎಪಿಗ್ರಪಿಯಾ ಕರ್ನಾಟಕದಲ್ಲಿ ಒಟ್ಟು ತಾಲ್ಲೂಕಿನ ೧೨೩ ಶಾಸನಗಳು, ಮೈಸೂರಿನ ಪ್ರಾಚ್ಯವಸ್ತು ಇಲಾಖೆಯ ವರದಿಯಲ್ಲಿ ಒಟ್ಟು ೦೮ ಹಾಗು ಶಿವಮೊಗ್ಗದ ಸಪ್ಲಿಮೆಂಟ್ ನಲ್ಲಿ ೦೧ ಶಾಸನ ಸೇರಿ ಒಟ್ಟು ೧೩೨ ಶಾಸನಗಳ ಬಗ್ಗೆ ಮಾಹಿತಿ ದಾಖಲಿಸಲಾಗಿದೆ. ಅವುಗಳೆಲ್ಲವೂ ಒಟ್ಟು ೪೭ ಗ್ರಾಮಗಳಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ಕಂಡುಬರುವ ಸ್ಥಳನಾಮಗಳ ಪ್ರಾಚೀನ ರೂಪ, ಕಾಲಾಂತರದಲ್ಲಿ ಅದರ ವ್ಯತ್ಯಾಸದ ರೂಪ, ಯಾವ ಶಾಸನ?, ಯಾರ ಕಾಲದ್ದು?, ಅವುಗಲ್ಲಿರುವ ವದಂತಿಗಳು, ಸ್ಥಳ ಪುರಾಣಗಳಲ್ಲಿ ಸಿಗುವ ನಾಮಗಳು ಹಾಗು ಅದರ ಬೇರೆ ಬೇರೆ ಹೆಸರುಗಳ ಕುರಿತು ಈ ಮುಂದೆ ಅವಲೋಕಿಸಲಾಗಿದೆ.

ಹೊನ್ನಾಳಿ ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಮುಂಭಾಗದಲ್ಲಿರುವ ಕಲ್ಲಿನ ಮೇಲಿನ ಕೆತ್ತನೆಯಲ್ಲಿ ಕಲ್ಯಾಣದ ಚಾಲುಕ್ಯ ದೊರೆ ತ್ರೈಲೋಕ್ಯ ಮಲ್ಲದೇವನ ಹಿರಿಯ ಪಟ್ಟದರಾಣಿ ಹೊಯ್ಸಳ ದೇವಿಯ ಆಳ್ವಿಕೆಯ ಕಾಲದಲ್ಲಿ ಮಾಚಗಾವೂಂಡನು ಬನವಾಸಿ ೧೨೦೦೦ರ ಬಲ್ಲವಿ ೭೦ರಲ್ಲಿ ತುಂಗಭದ್ರ ದಡದ ಮೇಲೆ ಕಟ್ಟಿಸಿದ ಮಲ್ಲಿಕೇಶ್ವರ ತೀರ್ಥಕ್ಕೆ ಭೂಮಿ ಹಾಗೂ ಎತ್ತಿನ ಗಾಣಗಳನ್ನು ಕೊಟ್ಟಿರುವ ಶಾಸನವಿದು. ಇದರ ಕಾಲ ಶ್ರೀಶಕೆ ೯೭೭. ಇದರಲ್ಲಿ ಒನ್ನಾಳಿ ಎಂದಿದ್ದು ಅದು ಕಾಲ ನಂತರ ಈಗ ಹೊನ್ನಾಳಿಯಾಗಿದೆ. ಸದರಿ ದೇವಸ್ಥಾನದ ಪೂರ್ವದಲ್ಲಿನ ವೀರಗಲ್ಲು ಶ್ರೀ ಶಕೆ ೯೮೬ ರಲ್ಲಿ ಕೆರ್ಗೆರೆಯ ಯಿರಮಾಚಗಾವುಂಡನ ತಮ್ಮ ಸೋಮಗಾವುಂಡನು ನಿಧನ ಹೊಂದಿದ ವೀರಗಲ್ಲಾಗಿದೆ ಇದರಲ್ಲಿ ಒನ್ನಾಳಿ ಎಂದಿದ್ದು ಅದು ಕಾಲ ನಂತರ ಈಗ ಹೊನ್ನಾಳಿಯಾಗಿದೆ. ಅದೇ ಸ್ಥಳದ ಮತ್ತೊಂದು ವೀರಗಲ್ಲು ಯಡೆಯೂರಿನ ಕೇಶಣ್ಣನು ನಿಧನ ಹೊಂದಿದ ಮಾಹಿತಿ ನೀಡುತ್ತದೆ. ಅದೇ ದಿನ ನಾಗಿಯ ಮಾಳಯ್ಯನು ನಿಧನ ಹೊಂದಿದ ಮಾಹಿತಿಯನ್ನು ಮತ್ತೊಂದು ಶಾಸನ ದಾಖಲಿಸಿದೆ ಇವೆರಡರಲ್ಲೂ ಒನ್ನಾಳಿ ಎಂದಿದ್ದು ಅದು ಕಾಲ ನಂತರ ಈಗ ಹೊನ್ನಾಳಿಯಾಗಿದೆ.

ದಿಡಗೂರು ಗ್ರಾಮದ ಶ್ರೀ ಆಂಜನೇಯ ದೇವಾಲದ ತೇರುಮನೆ ಹಿಂದಿನ ಗೋಡೆಗೆ ನಿಲ್ಲಿಸಿರುವ ಜೈನ ವಿಗ್ರಹದ ಪೀಠದಲ್ಲಿ ೧೨ ನೇ ಶತಮಾನದಲ್ಲಿ ಹೆರ್ಗಡೆಯವರಿಗೆ ಸೇವಾಕಾರ್ಯ ಮಾಡಿಕೊಂಡು ಹೋಗಲು ಭೂಮಿ ದಾನ ಮಾಡಿದ ವಿವರವಿದೆ ಇದರಲ್ಲಿ ಈಗಿನ ದಿಡಗೂರಿನ ಹೆಸರೇ ೧೨ ಶತಮಾನದಲ್ಲೂ ಬಳಕೆಯಲ್ಲಿದೆ. ಕುರುವ ಗಡ್ಡೆ ರಾಮೇಶ್ವರ ದೇವಾಲಯದ ದಕ್ಷಿಣಕ್ಕೆ ನಿಲ್ಲಿಸಿರುವ ಕಲ್ಲಿನಲ್ಲಿ ವಿಜಯ ನಗರ ಅರಸ ಹರಿಹರ ॥ ಕಾಲದಲ್ಲಿ ಶ್ರೀಶಕೆ ೧೩೧೨ ರಲ್ಲಿ ಆನವೇರಿ ನಾಡಿನ ಅಅಉವಕ್ಕನ ಕುರುವ ಗಡ್ಡೆ ರಾಮೇಶ್ವರ ದೇವರ ನಂದಾದೀವಿಗೆ ನೈವೇದ್ಯಕ್ಕೆಂದು ಆಲೂರು ಸೀಮೆಯೊಳಗೆ ರಾಮೇಶ್ವರ ದೇವರ ಪೂರ್ವಕ್ಕೆ ತುಂಗಭದ್ರ ನದಿಯ ಸಮೀಪದಲ್ಲಿ ಅಅಉಕ್ಕನಗುಂಡಿಗೆ ಗುಡಿಯ ಕಂಬ ನೆಟ್ಟು ಮುಂದೆ ಯಾರು ಕರ ವಸೂಲಿ ಮಾಡಬಾರದೆಂದು ಸುತ್ತಮುತ್ತಲ ಗೌಡರು ಸೇರಿ ನಿರ್ಧರಿಸಿರುವ ಮಾಹಿತಿ ಇದೆ. ಇದರಲ್ಲಿ ಕನದವಾಡಿ, ಅರಕೆರೆ, ಹುಣಸೆಹಳ್ಳಿ, ಹೊಸಹಳ್ಳಿ, ಮಾವಿನಕೋಟೆ, ಸಾಲಿಬಾಳ, ಬೆನಕನಹಳ್ಳಿ, ಬಿಶಗೌಂಡನಹಳ್ಳಿ, ಹುರವೆಹಳ್ಳಿ, ಕುರುವ, ಸಾಸಿವೆಹಳ್ಳಿ, ಸೂರೆಗಉಡ, ಕಾಣವತಲೆ, ಹರುಗುಲಹಳ್ಳಿ, ಕಂಚಗಾರನಹಳ್ಳಿ, ಹುಣ್ಸದಘಟ್ಟ, ಬಇರಗೂಳ್ಳಿ ರಾಮಪುರಗಳು ನಮೂದಾಗಿವೆ. ಅವುಗಳಲ್ಲಿ ಕನದವಾಡಿ ಈಗ ಹನಗವಾಡಿಯಾಗಿರಬಹುದು. ಸಾಲಿಬಾಳ ಈಗ ಸಾಲುಬಾಳವಾಗಿದೆ.

ಬಿಶಗೌಂಡನಹಳ್ಳಿ ಈಗ ಬೀರಗೊಂಡನಹಳ್ಳಿಯಾಗಿದೆ. ಹುರವೆಹಳ್ಳಿ ಈಗ ಹುರಳಿಹಳ್ಳಿ ಯಾಗಿದೆ. ಸಾಸಿವೆಹಳ್ಳಿ ಈಗ ಸಾಸ್ವೆಹಳ್ಳಿಯಾಗಿದೆ. ಕಾಣವತಲೆ ಈಗ ಕೋಣನತಲೆಯಾಗಿದೆ, ಹರುಲಹಳ್ಳಿ ಈಗ ಹರಗನಹಳ್ಳಿಯಾಗಿದೆ. ಹುಣ್ಸದಗಟ್ಟ ಈಗ ಹುಣಸಘಟ್ಟವಾಗಿದೆ. ಬಇರಗೂಳ್ಳಿ ಈಗನ ಬೈರನಹಳ್ಳಿಯಾಗಿರಬಹುದು. ರಾಮಪುರ ಈಗಿನ ರಾಂಪುರವಾಗಿದೆ. ಆದರೆ ಉಳಿದ ಗ್ರಾಮಗಳ ಹೆಸರು ಈಗಲೂ ಅದೇ ರೀತಿಯಲ್ಲಿ ಬಳಕೆಯಲ್ಲಿವೆ. ಅದೇ ದೇವಸ್ಥಾನದ ಮತ್ತೊಂದು ಶಾಸನ ಹೊಯ್ಸಳ ದೊರೆ ವೀರಬಲ್ಲಾಳ॥ ಕಾಲದ ಸಾಮಂತ ದೊರೆ ಸಿಂದ್ ವಂಶದ ಈಶ್ವರ ಮಂಡಲೇಶ್ವರನ ಮಗ ಮಲ್ಲಿದೇವನ ಕಾಲದ್ದು ಇದರಲ್ಲಿ ಅನೇಕ ಸಾಮಂತರು ನೀಡಿರುವ ದಾನದ ಪಟ್ಟಿ ಇದೆ ಅಂದರೆ ಇದರಲ್ಲಿ ಕುರುವದ ರಾಮನಾಥ ದೇವರಿಗೆ, ನೆಲವತ್ತಿಯ ಬ್ರಾಹ್ಮಣರಿಗೆ ಭೂಮಿ ಹಾಗೂ ನಿವೇಶನಗಳನ್ನು ನೀಡಿರುವ ವಿವರ ಇದೆ. ಇದರಲ್ಲಿ ಕಂಕನಹಳ್ಳಿ, ಐಯ್ಯಣೂರು, ಕೋಟೆಹಾಳ್,ಬೆಳಗವತ್ತಿ, ಸೌಳಂಗ, ಮಣಲಿ, ಮಾದನಬಾಗಿ. ಇವುಗಳಲ್ಲಿ ಐಯ್ಯಣೂರು ಈಗ ಐನೂರು ಆಗಿದೆ. ಬೆಳಗವತ್ತಿ ಬೆಳಗುತ್ತಿಯಾಗಿದೆ, ಮಣಲಿ ಈಗ ಮಳಲಿ ಯಾಗಿದೆ. ಮಾದನಬಾಗಿ ಈಗ ಮಾದನಬಾವಿಯಾಗಿದೆ. ಉಳಿದ ಹಳ್ಳಿಗಳು ಯತಾವತ್ತಾಗಿ ಬಳಕೆಯಲ್ಲಿವೆ. ಅದೇ ದೇವಸ್ಥಾನದ ಉತ್ತರದ ಕಡೆ ನೆಟ್ಟಿರುವ ಶಾಸನವು ಹೊಯ್ಸಳ ದೊರೆ ವೀರ ನರಸಿಂಹ ॥ ಕಾಲದ್ದು ಇದರ ಕಾಲ ಶ್ರೀಶಕೆ ೧೧೫೦. ಇದರಲ್ಲಿ ಮೊರಗುರುವದ ರಾಮನಾಥ ದೇವರಿಗೆ ಹೆಗ್ಗಡೆ ಹರಿಬಯ್ಯ ಮತ್ತು ಅನೇಕರು ಕೊಡಮಾಡಿದ ದಾನವನ್ನು ದಾಖಲಿಸಲಾಗಿದೆ. ಇದರಲ್ಲಿ ಬೇಗೂರು, ಕುರುವ, ಬಳ್ಳೆಯ ಗಳು ನಮೂದಾಗಿವೆ. ಅದೇ ದೇವಾಲಯದ ಮಹಾದ್ವಾರದ ಇರುವ ಶಾಸನವು ವಿಜಯನಗರದ ಅರಸ ಸದಶಿವರಾಯನ ಕಾಲದ್ದು, ಇದರಲ್ಲೆ ಕುರುವದ ರಾಮೇಶ್ವದ ದೇವರಿಗೆ ದೇವತ ಕಾರ್ಯಗಳಿಗಾಗಿ ಯಜುಶಾಕೆಯ ವ್ಯಕ್ತಿಯೊಬ್ಬರು ಕೆಳದಿ ರಾಜರಿಗೆ ಅಮರ ಮಾಗಣಿಯಾಗಿ ಕುರುವ, ಹಾರನಹಳ್ಳಿ ಸೇರಿದ ಎಡೆಕೊಪ್ಪ, ಸಿರಿಗಿರಿಪುರಗಳ ತಳವಾರಿಕೆಯನ್ನು ಮುಕ್ತಗೊಳಿಸಿದ ವಿವರಿಕೆ ಇದೆ. ಇದರ ಕಾಲ ಶ್ರೀ ಶಕೆ ೧೪೭೯ ಇದರಲ್ಲಿ ಹೊಂನಾಳಿ, ಮೊರಸಗೊಂಡನಹಳ್ಳಿ, ಸಿರಿಗೆರ, ಹಾರನಹಳ್ಳಿ, ಎಡೆಕೊಪ್ಪ, ಸಿರಿಗಿರಪುರಗಳು ನಮೂದಾಗಿವೆ. ಅದೇ ದೇವಸ್ಥಾನದ ಉತ್ತರದಲ್ಲಿ ಸೋಮಸೂತ್ರದ ಬಳಿ ಇರುವ ಕಲ್ಲು ಹೊಯ್ಸಳರ ಕಾಲದ್ದು ಇದರಲ್ಲಿ ಯಾವುದೇ ಸ್ಥಳಗಳ ನಮೂದು ಇರುವುದಿಲ್ಲ. ಆದರೆ ಸಾಸುವೆಹಳ್ಳ ನಮೂದಾಗಿದೆ. ಇದು ಈಗಿನ ಸಾಸ್ವೆಹಳ್ಳಿಯಾಗಿದೆ. ಕುರುವ ಗ್ರಾಮದಲ್ಲಿರುವ ಶಾಸನ ಚಾಲುಕ್ಯರ ಕಾಲದ್ದು ಅದರಲ್ಲಿ ಚೀಲೂರು, ಕೋಟೆಹಾಳ, ಬಳ್ಳೆ, ಗ್ರಾಮಗಳ ಹೆಸರು ಸೇರ್ಪಡೆಗೊಂಡಿವೆ.

ಬಳ್ಳೇಶ್ವರದ ಬಳ್ಳಲಿಂಗದ ದೇವಾಲಯದ ಮುಂದಿರುವ ಶಾಸನವು ಸೆವುಣ ದೊರೆ ರಾಮಚಂದ್ರನ ವಂಶವಳಿಯನ್ನು ಬಿತ್ತರಿಸಲಾಗಿರುವ ವಿವರವಿದೆ. ಇದರಲ್ಲಿ ಜಾಲಿವಳೆ ಎಂದು ಉಲ್ಲೇಖವಾಗಿದೆ. ಆದರೆ ಇದು ಈಗಿನ ಜಾವಳ್ಳಿಯಾಗಿರಬಹುದಾಗಿದೆ. ಚೀಲೂರು ಗ್ರಾಮದ ರಾಮೇಶ್ವರ ದೇವಾಲಯದ ಹಿಂದೆ ಇರುವ ಶಾಸನವು ಪರಶುರಾಮ ದೇವರಿಗೆ ನೂರೆಂಟು ದ್ವಿಪಗಳನ್ನು ಒದಗಿಸಲು ಕೊಡಮಾಡಿದ ಭೂ ವಿವರವಿದೆ. ಇದರಲ್ಲಿ ಈಗಿನ ಚೀಲೂರು, ಕೊಂಡೆನಾಯಕನಹಳ್ಳಿ ಉಲ್ಲೇಖವಾಗಿವೆ. ಕೊಂಡೆನಾಯಕನಹಳ್ಳಿ/ಕೊನನಾಯಕನಹಳ್ಳಿ ಆಗಿರಬಹುದು. ಮಾದನಭಾವಿ ಗ್ರಾಮದ ರಂಗಪ್ಪ ದೇವಸ್ಥಾನದ ದಕ್ಷಿಣಕ್ಕಿರುವ ಶಾಸನವು ಸೇವಣ ದೊರೆ ಸಿಂಗಣ –॥ ಕಾಲದ್ದು. ಇದರಲ್ಲಿ ಸಿಂಧ್ ವಂಶದ ಮುಖ್ಯಸ್ಥ ಈಶ್ವರ ದೇವ ಮತ್ತು ಅವನ ವಂಶಾವಳಿಯ ವಿವರ ಹೊಂದಿದೆ. ಕೋಟೆಹಾಳ, ಚೀಲೂರು, ಉಚ್ಚಂಗಿ, ಬೆಳಗವತ್ತಿ, ಒನ್ನಾಳಿ, ಮೇದೂರೂ, ಉಲ್ಲೇಖಗೊಂಡಿವೆ. ಸೊರಟೂರು ಗ್ರಾಮದಲ್ಲಿ ೩ ವಿರಗಲ್ಲು ಹಾಗೂ ೧ ಮಾಸ್ತಿಕಲ್ಲುಗಳ ವಿವರ ದೊರೆತಿದೆ. ಇವುಗಳಲ್ಲಿ ರಟ್ಟಪಳ್ಳಿ, ಬನವಾಸಿ, ಗಳು ಉಲ್ಲೇಖವಾಗಿವೆ ಕಾಲ ನಮೂದಾಗಿರುವುದಿಲ್ಲ. ರಟ್ಟಪಳ್ಳಿ ಈಗಿನ ರಟ್ಟೆಹಳ್ಳಿಯಾಗಿದೆ. ಚಿಕ್ಕೆಎರೆಹಳ್ಳಿ ರಾಮೇಶ್ವರ ದೇವಸ್ಥಾನದಲ್ಲಿ ೨ ಶಾಸನಗಳು ಹಾಗೂ ೫ ವೀರಗಲ್ಲುಗಳು ಮತ್ತು ಜೈನ ಬಸದಿಯ ಬಳಿ ಒಂದು ಶಾಸನದ ವಿವರಗಳು ದೊರೆತಿವೆ, ಇವೆಲ್ಲವೂ ೧೧ ನೇ ಶತಮಾನಕ್ಕೆ ಸೇರಿದವುಗಳಾಗಿವೆ. ಇವುಗಳಲ್ಲಿ ಬೆಳಗವರ್ತಿ, ಹತಿವೂರು, ಸೊರಟ್ಟೂರು, ಕತ್ತಗಿ, ಮಗುಸಾಡಿಗಳು ಉಲ್ಲೇಖವಾಗಿವೆ. ಇವುಗಳಲ್ಲಿ ಬೆಳಗವರ್ತಿ ಈಗ ಬೆಳಗುತ್ತಿಯಾಗಿದೆ. ಹತ್ತವೂರು ಈಗ ಹತ್ತೂರು ಆಗಿದೆ. ಮಗುಸಾಡಿ ಈಗಿನ ಮಾಸಡಿ ಇರಬಹುದೆಂದು ಊಹಿಸಲಾಗಿದೆ. ಕತ್ತಿಗಿ ಗ್ರಾಮದ ಉಂಬಳಿ ಹೊಲದ ಶಾಸನದ ಒಂದು ವಿವರ ದೊರೆತಿದೆ. ಇದರಲ್ಲಿ ಮುಗಳಿ ಅಂತ ಉಲ್ಲೇಖವಾಗಿದ್ದು ಇದು ಈಗಿನ ಮುಗಳಹಳ್ಳಿ ಇರಬಹುದಾಗಿದೆ. ದಾಸರಹಟ್ಟಿ ಸಮೇರಾಯರ ಗೌಡರಂಗಪ್ಪನ ಮಗ ನಿಂಗಪ್ಪನಿಂದ ಬಂದ ತಾಮ್ರ ಶಾಸನದ ವಿವರ ಲಭ್ಯವಾಗಿದೆ. ಇದರ ಕಾಲ ಸುಮಾರು ೧೪ ನೇ ಶತಮಾನವಾಗಿದೆ. ಇದರಲ್ಲಿ ನೆಮತ್ತಿ, ಧಾನರಹಟ್ಟಿ, ಧೂಡಯತ್ತಿನಹಳ್ಳಿ, ಕಂಕನಹಳ್ಳಿ, ಬಿದರೆ, ಗಾಂಗನಕೋಟೆ, ಮಳೇನಹಳ್ಳಿ, ಸೀಮೊಗ್ಗೆ, ದಿಡಗೂರು, ಸಮಗೊಂಡನಹಳ್ಳಿ, ಉಲ್ಲೇಖಗೊಂಡಿದ್ದು ಇವುಗಳಲ್ಲಿ ನೆಮತ್ತಿ ಈಗಿನ ನ್ಯಾಮತಿಯಾಗಿದೆ, ಧಾನರಹಟ್ಟಿ>ದಾಸರಹಟ್ಟಿ, ಧೂಡಯತಿನಹಳ್ಳಿ>ದೊಡ್ಡೆತ್ತಿನಹಳ್ಳಿ, ಗಾಂಗನಕೋಟೆ>ಗಂಗನಕೋಟೆ, ಮಳೇನಹಳ್ಳಿ/ಮಲ್ಲಿಗೆನಹಳ್ಳಿ ಇರಬಹುದು, ಸೀಮೊಗ್ಗೆ>ಶಿವಮೊಗ್ಗ, ಸಮಗೊಂಡನಹಳ್ಳಿ> ಸಾವಗೊಂಡನಹಳ್ಳಿ ಯಾಗಿದ್ದು ಈಗ ಇದು ಬೇಚಾರಕ್ ಗ್ರಾಮವಾಗಿದೆ. ಬೆಳಗುತ್ತಿ ಗ್ರಾಮದಲ್ಲಿ ೧೭ ವಿರಗಲ್ಲುಗಳ ಮಾಹಿತಿ ಲಭ್ಯವಾಗಿದೆ. ಇವುಗಳ ಕಾಲ ಸುಮಾರು ೧೧ ನೇ ಶತಮಾನವಾಗಿದೆ. ಇವುಗಳಲ್ಲಿ ನೆಲುವಾಗಿಲು, ಹತ್ತಿವೂರು, ಗುತ್ತನಹಳ್ಳಿ, ರಟ್ಟಪಳ್ಳಿ, ಉಲ್ಲೇಖಗೊಂಡಿವೆ. ನೆಲವಾಗಿಲು ಹರಪನಹಳ್ಳಿಗೆ ಸೇರಿದ ಗ್ರಾಮ, ಗುತ್ತನಹಳ್ಳಿ ಈಗಿನ ಸಾಗರ ತಾಲ್ಲೂಕಿನ ಗ್ರಾಮವಾಗಿದೆ. ತಿರ್ಥರಾಮೇಶ್ವರ ಗ್ರಾಮದಲ್ಲಿ ೨ ಶಾಸನಗಳ ಮಾಹಿತಿ ಲಭ್ಯವಾಗಿದೆ. ಕುಳ್ಳಳ್ಳಿ ಗ್ರಾಮದಲ್ಲಿ ೬ ವಿರಗಲ್ಲುಗಳ ಮಾಹಿತಿ ಲಭ್ಯವಾಗಿದೆ, ಇವುಗಳ ಕಾಲ ಸುಮಾರು ೧೩ ನೇ ಶತಮಾನವಾಗಿದೆ. ಸವಳಂಗ ಗ್ರಾಮದಲ್ಲಿ ೩ ಶಾಸನಗಳ ೧ ವಿರಗಲ್ಲಿನ ವಿವರ ಲಭ್ಯವಿದೆ. ಇವುಗಳಲ್ಲಿ ಆನೆಗುಂದಿ, ಸೌಳಂಗ, ಉಲ್ಲೇಖಗೊಂಡಿವೆ. ನ್ಯಾಮತಿ ಗ್ರಾಮದಲ್ಲಿ ೩ ವಿರಗಲ್ಲುಗಳ ೫ ಶಾಸನಗಳು ಇದ್ದು, ಇವು ಚಾಲುಕ್ಯರ ಹಾಗೂ ವಿಜಯನಗರದ ಕಾಲದವಾಗಿದ್ದು, ಇವುಗಳ ಕಾಲ ಸುಮಾರು ೮ ರಿಂದ ೧೩ ನೇ ಶತಮಾನವಾಗಿದೆ. ಇವುಗಳಲ್ಲಿ ಕೊಪ್ಪಣ, ನೆಲವತ್ತಿ, ಮಲೆಯನೂರು. ಉಲ್ಲೇಖಗೊಂಡಿವೆ ಆದರೆ ಕೊಪ್ಪಣ>ಕೊಪ್ಪಳ, ನೆಲವತ್ತಿ ಹಾಗೂ ಮಲೆಯನೂರುಗಳ ಮಾಹಿತಿ ಲಭ್ಯವಿಲ್ಲ. ಯರಗನಹಾಳು ವೀರಭದ್ರ ದೇವಸ್ಥಾನದ ಮುಂದೆ ಗರುಡ ಗಂಬದ ಮೇಲಿನ ವಿವರ ಲಭ್ಯವಾಗಿದೆ. ಸುರಹೊನ್ನೆ ಗ್ರಾಮದ ಶಾಸನ ಒಂದು ವಿಜಯನಗರ ಅರಸ ಹರಿಹರ ॥ (೧೩೯೭) ಕೋಟೆ ಆಳುತಿದ್ದ ಉಲ್ಲೇಖದ ವಿವರವಿದೆ. ಇದರಲ್ಲಿ ಹಸ್ತಿನಾವತಿ, ಚಂದ್ರಗುತ್ತಿ, ಸುರಹೊನ್ನೆ, ಬನವಾಸೆ ಗಳು ಉಲ್ಲೇಖಗೊಂಡಿವೆ.

ಕಂಚಿಗನಹಳ್ಳಿ ೨ ವೀರಗಲ್ಲುಗಳ ಮಾಹಿತಿ ಲಭ್ಯವಾಗಿದೆ. ಇದರಲ್ಲಿ ಸಿಂಗಟನೂರು>ಸಿಂಗಟಗೆರೆ ಆಗಿರಲೂಬಹುದು. ಚಟ್ನಹಳ್ಳಿಯಲಿ ಹೊಯ್ಸಳ ದೊರೆ ವೀರಬಲ್ಲಾಳ ॥। ನ (೧೨೮೫) ಕಾಲಕ್ಕೆ ಸೇರಿದ ೩ ಶಾಸನಗಳ ಮಾಹಿತಿ ದೊರೆತಿದೆ. ಇವುಗಳಲಿ ಕೆಳದಿ, ಬೆಳಗವತ್ತಿ, ನೇಮತ್ತಿ, ಹತ್ತವೂರು, ಸುರಟೂರು, ಚಿಡಗೂರು, ವೊನ್ನಾಳಿ, ಹರಬೆನಗೂರು, ಗೋಳೆಹಳ್ಳಿ, ಗೋವನಹಳ್ಳಿ, ಮಾದನಬಾವಿ, ಚಟ್ಟನಹಳ್ಳಿಗಳ ಉಲ್ಲೇಖವಿದೆ. ಇವುಗಳಲ್ಲಿ ಬೆಳಗವತ್ತಿ>ಬೆಳಗುತ್ತಿ, ನೇಮತ್ತಿ>ನ್ಯಾಮತಿ, ಹತ್ತಿವೂರು>ಹತ್ತೂರು,

ಸುರಟೂರು>ಸೊರಟೂರು, ಚಿಡಗೂರು>ದಿಡಗೂರು, ವೊನ್ನಾಳಿ>ಹೊನ್ನಾಳಿ, ಹರಬೆನಗೂರು> ?, ಗೋಳೆಹಳ್ಳಿ>ಗೋಪಗೊಂಡನಹಳ್ಳಿ, ಗೋವನಹಳ್ಳಿ>ಗೊಲ್ಲರಹಳ್ಳಿ. ಕುಂಕವ ಗ್ರಾಮದಲ್ಲಿ ೨ ಶಾಸನಗಳ ಮಹಿತಿ ಲಭ್ಯವಾಗಿದೆ. ಗುಂಡಿಚಟ್ನಹಳ್ಳಿಯಲ್ಲಿ ಮಾರ ಬೊಮ್ಮರಸರ ರಾಜ್ಯದ ಉಲ್ಲೆಖವಿರುವ ೨ ಶಾಸನಗಳ ಮಾಹಿತಿ ಲಭ್ಯವಾಗಿದ್ದು,ಇವುಗಳಲ್ಲಿ ಈಸೂರು ಗ್ರಾಮ ಉಲ್ಲೇಖಗೊಂಡಿದೆ. ಜೊಗ ಗ್ರಾಮದಲ್ಲಿ ಚಾಲುಕ್ಯ ದೊರೆ ತ್ರಿಭುವನೈಕಮಲ್ಲದೇವರ (೧೦೭೧)ಕಾಲದ ಒಂದು ಶಾಸನದ ವಿವರ ಲಭ್ಯವಾಗಿದೆ. ಚಿನ್ನಿಕಟ್ಟೆ ಗ್ರಾಮದಲ್ಲಿ ೧ ಕಂಬ ಶಾಸನದ ಮಾಹಿತಿ ಲಭ್ಯವಾಗಿದ್ದು, ಇದರಲ್ಲಿ ಚಿಣಿಕಟ್ಟೆ>ಚಿನ್ನಿಕಟ್ಟೆ ಬದಲಾಗಿದೆ. ಒಡೆಯರಹತ್ತೂರು ಗ್ರಾಮದಲ್ಲಿ ಗುರುಬಸವಯ್ಯ ಬಿನ್ ಮಲ್ಲಪ್ಪ ಮುದಿಮಲ್ಲಪ್ಪನ ತಾಮ್ರಶಾಸನದ ಮಾಹಿತಿ ಲಭ್ಯವಾಗಿದ್ದು, ಇದರಲ್ಲಿ ಇಕ್ಕೇರಿ, ಹೊಸಪೇಟೆ, ಮೈಲಾರಗಳು ಉಲ್ಲೇಖಗೊಂಡಿವೆ. ಸಾಸಿವೆಹಳ್ಳಿಯಲ್ಲಿ ೨ ವಿರಗಲ್ಲುಗಳ ಮಾಹಿತಿ ಲಭ್ಯವಿದ್ದು, ಇವುಗಳಲ್ಲಿ ಹರಿಹರ, ನಿಟ್ಟೂರು, ಹಾರಿವಾಳ>ಹಾಲಿವಾಣ, ಕುನಿಗನಘಟ್ಟ>ಕುಳಗಟ್ಟ ಉಲ್ಲೇಖಗೊಂಡಿವೆ. ಮಾವಿನಕೋಟೆಯಲ್ಲಿ ಹೊಯ್ಸಳ ದೊರೆ ವಿಜಯನರಸಿಂಹನ ಕಾಲದ ೪ ಶಾಸನಗಳು ಲಭ್ಯವಾಗಿದ್ದು, ಇವುಗಳಲ್ಲಿ ಕೊಳ್ಳಿನಘಟ್ಟ–ಕೊಳ್ಳಿಗನಗಟ್ಟ–ಕೊಳ್ಳಿಗನಗಟ್ಟಹಳ್ಳಿ>ಕುಳಗಟ್ಟೆ, ಸಾಶವಿಹಳ್ಳಿ/ಸಾಸಿವೆಹಳ್ಳಿ ಉಲ್ಲೇಖ್ತಗೊಂಡಿವೆ. ಹಾಲಿವಾಣದಲ್ಲಿ ೪ ವಿರಗಲ್ಲಗಳ ವಿವರ ಲಭ್ಯವಾಗಿದ್ದು, ಇವುಗಳ ಕಾಲ ೧೫ ನೇ ಶತಮಾನವಾಗದೆ: ಹಾಲಿವಾಳ>ಹಾಲಿವಾಣ. ಸಿಂಗಟಗೆರೆಯಲ್ಲಿ ವಿಜಯನಗರ ಕಾಲದ (೧೪೦೧) ೧ ಶಾಸನದ ವಿವರ ಲಭ್ಯವಾಗಿದ್ದು, ಇದರಲ್ಲಿ ರಾಮನಕೆರೆ ಗ್ರಾಮದ ಉಲ್ಲೇಖವಾಗಿದ: ಕುಣಿಗಲುಘಟ್ಟ ದಲ್ಲಿ ಹೊಯ್ಸಳರ ಕಾಲದ (೧೨೧೧–೧೯೯೧) ಲಭ್ಯವಾಗಿದ್ದು, ಇದರಲ್ಲಿ ಚೋಳಮಹಾದೇವಿಪುರ,ಕೊಳ್ಳಿಗನಗಟ್ಟ>ಕುಳಘಟ್ಟೆ, ಅಯ್ಯವಳೆ, ತಾಳವಳಗೆ, ನವದ್ವಾರದವಗಳ ಉಲ್ಲೇಖವಾಗಿವೆ. ಬೇಲಿಮಲ್ಲೂರು ಗ್ರಾಮದಲ್ಲಿ ಹೊಯ್ಸಳರ ಕಾಲಕ್ಕೆ ಸಂಬಧಿಸಿದ ೪ ವಿರಗಲ್ಲುಗಳ ಮಾಹಿತಿ ಲಭ್ಯವಾಗಿದ್ದು, ಇವುಗಳಲ್ಲಿ ಮಲವೂರ>ಮಲ್ಲೂರು, ಮಲೆವೂರು>ಮಲ್ಲೂರು, ಅರಕೆರೆಗಳ ಉಲ್ಲೇಖವಾಗಿದೆ. ಚಿಕ್ಕಗೋಣಿಗೆರೆ ೧ ವಿರಗಲ್ಲು ಹಾಗೂ ೧ ಶಾಸನದ ವಿವರ ಲಭ್ಯವಾಗಿದ್ದು, ಇವುಗಳಲ್ಲಿ ಗಾಜನೂರು, ಚಿಕಗೋಳಿಗೆರೆ>ಚಿಕ್ಕಗೋಣಿಗೆರೆ, ಗಾಜನೂರುಗಳ ಉಲ್ಲೇಖವಾಗಿದೆ. ಕ್ಯಾಸಿನಕೆರೆಯಲ್ಲಿ ೧ ಉಂಬಳಿ ಶಾಸನದ ಮಾಹಿತಿ ಲಭ್ಯವಾಗಿದ್ದು. ಚೆನ್ನಮುಂಬಾಪುರ ಹಾಗು ಕುಂದೂರು ಗ್ರಾಮದಲ್ಲಿ ೨ ದಾನ ಶಾಸನಗಳ ವಿವರ ಲಭ್ಯವಾಗಿದೆ, ಇವುಗಳಲ್ಲಿ ಕುಂದೂರು, ಚೆನಂಮಾಂಬಾಪೂರ> ಚೆನ್ನಮಾಂಬಾಪುರ ಗಳ ಉಲ್ಲೇಖವಾಗಿವೆ. ಮುಕ್ತೆನಹಳ್ಳಿ ಗ್ರಾಮದಲ್ಲಿ ೧ ಶಿಲಾಶಾಸನದ ವಿವರ ಲಭ್ಯವಾಗಿದ್ದು. ಇದರಲ್ಲಿ ಮುಗತೆನಹಳಿ>ಮುಕ್ತೇನಹಳ್ಳಿ ಉಲ್ಲೇಖಗೊಂಡಿವೆ.

ಅರಕೆರೆ ಗ್ರಾಮದಲ್ಲಿ ಹೊಯ್ಸಳ ರಾಜ ವೀರಬಲ್ಲಾಳ–॥ ನ ಕಾಲದ(೧೦೪೭) ೧ ದಾನ ಶಾಸನ ಹಾಗೂ ೫ ವೀರಗಲ್ಲುಗಳ (೧೨೦೩) ಜೊತೆಗೆ ಚಾಲುಕ್ಯರ ಕಾಲದ ೧ ದಾನ ಶಾಸನದ ವಿವರ ಲಭ್ಯವಿದ್ದು, ಇವುಗಳಲ್ಲಿ ಕೊಗಳಿ, ಅರಕೆರೆ, ಆರಗಿಲು, ಮುದುಗೆರೆ, ಐನೂರು ಉಲ್ಲೇಖವಾಗಿವೆ. ಹೊಸಹಳ್ಳಿ ಗ್ರಾಮದಲ್ಲಿ ೧ ದಾನ ಶಾಸನ ಮತ್ತು ೧ ವೀರಗಲ್ಲು ಶಾಸನದ ಮಾಹಿತಿ ಲಭ್ಯವದೆ, ಇವುಗಳಲ್ಲಿ ಕೋಟಿಗನಪುರ, ಕೊಲುವಳ್ಳಿ>ಕುಳಳ್ಳಿ ಹೊಸವಳ್ಳಿ>ಹೊಸಹಳ್ಳಿ, ಹನಗವಾಡಿ, ಚೀಲೂರು, ದೋರಸಮುದ್ರ ಗಳ ಉಲ್ಲೇಖವಿದೆ. ಹನಗವಾಡಿಯಲ್ಲಿ ೧ ವಿರಗಲ್ಲು ಇದ್ದು ಇದರಲ್ಲಿ ಚಂದವೂರು ಉಲ್ಲೇಖವಾಗಿದೆ. ಮಾವಿನಕೋಟೆ ಮತ್ತು ನೆರಲಗುಂಡಿಯಲ್ಲಿ ಒಂದೊಂದು ಶಾಸನದ ಮಾಹಿತಿ ಲಭ್ಯವಾಗಿದ್ದು, ಇದರಲ್ಲಿ ನೇರಿಲುಗುಂಡಿ ಉಲ್ಲೇಖವಾಗಿದೆ. ಕೂಲಂಬಿ ಗ್ರಾಮದಲ್ಲಿ ೪ ಶಾಸನಗಳ ಅಸ್ಪಷ್ಟ ಮಾಹಿತಿ ಲಭ್ಯವಾಗಿದ್ದು; ಇವುಗಳಲ್ಲಿ ಬಸವಪಟ್ಟಣ, ಹೊಸಹಳ್ಳಿ, ಆನೆಗುಂದಿ, ಸಉಳಂಗ>ಸವಳಂಗ ಉಲ್ಲೇಖಗೊಂಡಿವೆ. ಗಂಜೇನಹಳ್ಳಿಯ ಲಿಂಗಮುದ್ರೆ ಕಲ್ಲು ಲಭ್ಯವಾಗಿದ್ದು, ಇದರಲ್ಲಿ ಬೆಳಗಾವತ್ತಿ>ಬೆಳಗುತ್ತಿ ಹಾಗೂ ಮಲ್ಲಗೆನಹಳ್ಳಿಯ ವೀರಗಲ್ಲು, ಆರುಂಡೆಯ ದಾನಶಾಸನ ಯರಗನಹಾಳವಿನಲ್ಲಿ ವೀರಗಲ್ಲು ಲಭ್ಯವಾಗಿದ್ದು, ಇದರಲ್ಲಿ ಯರಗನಾಡ>ಯರಗನಾಳು, ಹೊನ್ನೂರನಾಡ, ಆಯನೂರಗಳ ಉಲ್ಲೇಖವಿದೆ. ಸವಳಂಗದ ಸತಿಕಲ್ಲು ಮತ್ತು ವೀರಗಲ್ಲುಗಳ ಪೂರ್ಣ ಮಾಹಿತಿ ಲಭ್ಯವಾಗಿದೆ. ಇದರಲ್ಲಿ ಆರಗ, ಸಮಳಂಗ>ಸವಳಂಗಗಳ ಉಲ್ಲೇಖವಾಗಿವೆ. ದಿಡಗೂರು ಗ್ರಾಮದ ಆಂಜನೇಯ ದೇವಾಲಯದ ಹಿಂದಿನ ಗೋಡೆಗೆ ನಿಲ್ಲಿಸಿರುವ ಜೈನ ವಿಗ್ರಹ ಪೀಠದಲ್ಲಿ ೧೨ ನೇ ಶತಮಾನದಲ್ಲಿ ಮೇಘಪಾಷಾಣಗಚ್ಛ ಹೆಗ್ಗಡೆ ಜಕ್ಕಯ್ಯ ಮತ್ತು ಅವನ ಹೆಂಡತಿ ಜಕ್ಕವ್ವೆ ನಿರ್ಮಿಸಿದ ಜೈನ ಬಸದಿ ಬಗ್ಗೆ ಮಾಹಿತಿ ನೀಡುತ್ತದೆ.

ಒಟ್ಟು ೧೩೨ ಶಾಸನಗಳಲ್ಲಿ ೬೩ ಗ್ರಾಮ ನಾಮಗಳ ಉಲ್ಲೇಖಗೊಂಡಿವೆ. ಇನ್ನೂ ಕೆಲವು ಹಳ್ಳಿಗಳ ಮಾಹಿತಿ ಲಭ್ಯವಾಗಿರುವುದಿಲ್ಲ ಅವುಗಳ ಬಗ್ಗೆ ಅಧ್ಯಯನ ಆಗಬೇಕಾದ ಅನಿವಾರ್ಯತೆ ಇದೆ. ಅಂತಹವುಗಳೆಂದರೆ ರಟ್ಟಪಳ್ಳಿ, ಕೋಗಳಿ, ಕರ್ಗೆರೆ, ಯಡೆವೂರು, ಅತ್ತಿಗೆರೆ, ನೆಲುವಾಗಿಲುಹಳ್ಳಿ, ನಿಟ್ಟೂರು, ಬಡತೂರು, ಹಗಡಮಕೆರೆ, ಗುತ್ತನಹಳ್ಳಿ, ಹರಬೆನೂಗೂರು, ಗೂಳೆಹಳ್ಳಿ, ಪುರದಹಳ್ಳಿ, ಆರಗ, ಸೂರಡಿ, ಮದನಾಡಿ, ತಿರುಮಲೆಪಟ್ಟಣ, ವಾರಣಾಸಿ, ಗಾಜನೂರು, ಗೋಳಿಗೋಡು, ಮಲಯನೂರು, ನೆಲಹೊತ್ತಿ ಇನ್ನೂ ಮುಂತಾದವುಗಳಿವೆ.

## ಪರಾಮರ್ಶನ ಗ್ರಂಥಗಳು


1. ಟಿ.ಗಿರಿಜಾ,–ದಾವಣಗೆರೆ ಇದು ನಮ ್ಮಜಿಲ್ಲೆ– ನಿಹಾರಿಕ ಪ್ರಕಾಶನ, ದಾವಣಗೆರೆ, ೨೦೦೧.
2. ಕಲ್ಬುರ್ಗಿ ಎಂ.ಎಂ –ಕರ್ನಾಟಕದ ಕೈಫಿಯತ್ತುಗಳು– ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೪.
3. ಶಿವತಾರಕ್ ಕೆ.ಬಿ.–ಕರ್ನಾಟಕ ಪುರಾತತ್ವ ನೆಲೆಗಳು, ಹೊನ್ನಾಳಿ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೧. ಪು. ೩೩೩–೩೪೨.
4. ಜಿಲ್ಲಾ ಪ್ರಾಕ್ತನ ಇಲಾಖೆ – ದಾವಣಗೆರೆ ಜಿಲ್ಲಾ ಶಾಸನ ಸೂಚಿ– ೨೦೧೮
5. ಡಾ ಕೊಟ್ರೇಶ ನಾ ಉತ್ತಂಗಿ–ಹೊನ್ನೆಲೆಗಳು– ಸಹನಾದ್ರಿ– ೨೦೦೧
6. ಕನ್ನಡ ಸಾಹಿತ್ಯ ಪರಿಷತ್ –ಕನ್ನಡ ನಿಘಂಟುಗಳು ೮ ಸಂಪುಟ
7. ಎಸ್ ಎಸ್ ಪಿ–ಶಿವಮೊಗ್ಗ ಸಪ್ಲಿಮೆಂಟ್
8. ಬಿ ಎಲ್ ರೈಸ್–ಎಪಿಗ್ರಪೀಯ ಕರ್ನಾಟಕ ಸಂಪುಟ ೭– ಮೈಸೂರು ವಿಶ್ವವಿದ್ಯಾಲಯ–೧೯೭೧
9. ಎಂ. ಚಿದಾನಂದಮೂರ್ತಿ– ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಾಯನ – ಮೈಸೂರು ವಿಶ್ವವಿದ್ಯಾಲಯ